ಮತ್ತೆರಡು ದಿನಗಳಲ್ಲಿ ಸಾರಿಗೆ ಮಂತ್ರಿಗಳೊಡನೆ ನಿಗದಿತವಾಗಿರುವ ಭೇಟಿ-ವ್ಯವಸ್ಥೆಯ ಬಗ್ಗೆ ಪಾರ್ಥ ಹೇಳಿದ.

ಗ್ಲಾಸಿನಲ್ಲಿದ್ದ ಕೊನೆಯ ಗುಟುಕನ್ನು ಬಾಯಿಗೆ ಸುರಿದುಕೊಂಡು, 'ಮೂಗಿನವರೆಗೆ ಬಂದಿದೆ ಮಾರಾಯ, ಈ ಲಂಚದ ಕಾರುಬಾರು. ಎಷ್ಟು ಕೊಟ್ಟರೂ ಇಲ್ಲ ಈ ..... ಮಕ್ಕಳಿಗೆ' ಎನ್ನುವಾಗ ಅವನ ಹಳೆಯ ಕ್ರಾಂತಿಕಾರಿ ರಕ್ತ ಬಿಸಿಯೇರುತ್ತಿತ್ತು. ಕುಡಿದ ಅಮಲಿನಲ್ಲಿ ಅವನ ಬಾಯಿಯಿಂದ ಅಲ್ಲಸಲ್ಲದ ಬೈಗಳು ಉದುರತೊಡಗಿದ್ದವು. ಮರುದಿನ ಕ್ಯಾಂಪಸ್ಸಿನ ಸುತ್ತಮುತ್ತ ತಿರುಗಾಟದ ಏರ್ಪಾಡು, ಪ್ರಾಧ್ಯಾಪಕರೊಡನೆ ಸಂವಾದ, ಇತ್ಯಾದಿ ಕಾರ್ಯಕ್ರಮಗಳಿದ್ದವು. ಸದ್ಯ ಕೊಲ್ಕತ್ತದ ಕಾಲೇಜೊಂದರಲ್ಲಿ ಪ್ರಾಧ್ಯಾಪಕನಾಗಿದ್ದ ಹಳೆಯ ಸಹಪಾಠಿ ಆನಂದಮೂರ್ತಿ ತನ್ನ ಹೆಗಲಲ್ಲಿದ್ದ ಜೋಳಿಗೆಯಿಂದ ಒಂದು ಚೀಟಿ ತೆಗೆದು ತೋರಿಸಿದ. ಅದರಲ್ಲಿ ಪಾರ್ಥ ಹಿಂದೊಮ್ಮೆ ಕಾಲೇಜು-ದಿನಗಳಲ್ಲಿ ಯಾವುದೋ ಕಾರ್ಯಕ್ರಮಕ್ಕೆಂದು ಬರೆದಿದ್ದ ಹಾಡಿತ್ತು. 'ನೀನೇ ಬರೆದದ್ದು, ನೆನಪಿದೆಯಾ?' ಎಂದು ಕೇಳಿದ. ಮುಂದಿನ ಕಾರ್ಯಕ್ರಮದಲ್ಲಿ ತಾನು ಅದನ್ನು ಹಾಡುವವನಿದ್ದೇನೆಂದೂ ಆನಂದಮೂರ್ತಿ ಹೇಳಿದ.

ಪಾರ್ಥನಿಗೆ ಯಾವಾಗಲೋ ಮರೆತುಹೋಗಿದ್ದ ಹಾಡು. ಅದನ್ನು ಪಾರ್ಥ ಕಾಲೇಜಿನ ದಿನಗಳ ಆಶೋತ್ತರಗಳ ಅಮಲಿನ ನಶೆಯಲ್ಲಿ ಬರೆದಿದ್ದ. ಆಗಿನದು ಎಂತಹ ಹುಚ್ಚುತನ ಎಂದುಕೊಳ್ಳುತ್ತ, ಕಿಸೆಯಿಂದ ಫೋನು ತೆಗೆಯುವ ನೆಪದಲ್ಲಿ ಅವನು ಹೊರನಡೆದ. ಹೊರಗೆ ಅಂಗಳದಲ್ಲಿ ಸಿಗರೇಟು ಸೇದುತ್ತಿದ್ದ ಅನಿರ್ಬನನು, 'ಸುಭಾಷ್ಚಂದ್ರಜೀ ಹೇಗಿದ್ದೀರಿ?' ಎಂದು ಕೇಳುತ್ತ, ಸಿಗರೇಟಿನ ಡಬ್ಬಿಯನ್ನು ಮುಂದೆ ಮಾಡಿದ.

ಪಾರ್ಥನನ್ನು ನೋಡಿದರೆ ಅವನು ಸುಭಾಷ್ಚಂದ್ರ ಬೋಸರಂತೆ ಕಾಣುತ್ತಿದ್ದುದು ಹೌದು. ಪಟ್ಟಿಪಟ್ಟಿಯಾದ ಕ್ರಾಪು, ಅಗಲ ಮುಖ, ದೊಡ್ಡ ದೊಡ್ಡ ಕಣ್ಣುಗಳು, ಕಾಲೇಜಿನ ದಿನಗಳಲ್ಲಿ ಸುಭಾಷರ ಹಾಗೆ ಕೈಕಟ್ಟಿ ನಿಂತು, ತಲೆಯ ಮೇಲೊಂದು ಟೊಪ್ಪಿ ಧರಿಸಿ ಫೋಟೋವನ್ನೂ ತೆಗೆಸಿದ್ದ.

'ಆ ಕಾಲವೊಂದಿತ್ತು... ಅದು ಬೇರೆಯೇ ಕಾಲ....' ಎಂದು ನಗುತ್ತ ಪಾರ್ಥ ಸಿಗರೇಟಿನತ್ತ ಕೈಚಾಚಿದ. 'ಈಗ ಅದರ ನೆನಪು... ಅದು ಇನ್ನಷ್ಟು ಬೇರೆ...' ಸಿಗರೇಟಿನ ಹೊಗೆ ಬಿಡುತ್ತ ಅನಿರ್ಬನನು ಕೈ ಮುಂದೆ ಮಾಡಿ, ಅದೇ ಧಾಟಿಯಲ್ಲಿ ಸೇರಿಸಿದ.

ಸಿಗರೇಟು ಮುಗಿಸಿದ ಮೇಲೆ ಅನಿರ್ಬನನು ಪಾರ್ಥನ ಹೆಗಲ ಸುತ್ತ ಕೈಹಾಕಿ ಒಳಗೆ ಕರೆದುಕೊಂಡು ಹೋಗುತ್ತಿದ್ದಂತೆ ಆನಂದಮೂರ್ತಿಯು ಮೈಕು ಹಿಡಿದು ನಿಂತದ್ದು ಕಂಡಿತು. 'ನಮ್ಮ ಕ್ರಾಂತಿಕಾರಿ ದಿನಗಳ ನೆನಪಿಗೆ,' ಎಂದು ಹೇಳಿ ಅದೇನೋ ವೀರಗಾಥೆ ಎಂಬಂತೆ, ಘೋಷಣೆಯ ಶೈಲಿಯಲ್ಲಿ ಹಾಡತೊಡಗಿದ್ದ:

**'ಎಂದು ಬಿಡುಗಡೆ ಈ ಕೂಪದಿಂದ**
**ಕವಿದ ಕತ್ತಲು ಅಳಲು ಆಕ್ರಂದನ**
**ಉರುಳುತಿವೆ ವರ್ಷಗಳು ಕೊನೆಯೆ ಇಲ್ಲ**
**ಸಾಂತ್ವನದ ಸ್ವರ ಇನ್ನು ಕೇಳಿಬಂದಿಲ್ಲ**
**ಸಡಿಲಾಗಲಿಲ್ಲ ಬಿಗಿದು ಕಟ್ಟಿದ ಹಗ್ಗ**
**ಬರಿದಾದ ಬಟ್ಟಲಲಿ ಉರಿದ ಬಡವನ ಹಸಿವು...'**

ತೀರ ಸಾಮಾನ್ಯ ರಾಗದ ಹಾಡಾದರೂ ಹಳೆಯ ಕಾಲೇಜು ದಿನಗಳ ನೆನಪಿನಿಂದಾಗಿ ಮನಕಲಕುವಂತಿತ್ತು. ಪಾರ್ಥನೇನೂ ಅಂತಹ ಭಾವನಾಜೀವಿ ಅಲ್ಲ. ಆದರೂ, ತಾರುಣ್ಯದ ಅಪ್ಪಟ ಕಳಕಳಿ, ಜಗತ್ತನ್ನೇ ಸರಿಮಾಡುತ್ತೇವೆಂಬ ಹುಚ್ಚು ಹುಮ್ಮಸ್ಸು, ಅನ್ಯಾಯವನ್ನು ನಾಮಾವಶೇಷಗೊಳಿಸುವ ಅದಮ್ಯ ನಂಬಿಗೆ ಎಲ್ಲವೂ ಒಂದರ ಹಿಂದೊಂದರಂತೆ ಮನಸ್ಸನ್ನು ವ್ಯಾಪಿಸಿದವು. ಆನಂದಮೂರ್ತಿಯ ಆಳವಾದ ದನಿಯ ಗಾಢತೆ ಆ ಶಬ್ದಗಳಿಗೆ ಜೀವ ಕೊಟ್ಟಿತ್ತು.

ಕವಿತೆಯ ಕೊನೆಯಲ್ಲಿ, 'ಹೊರದಬ್ಬು ಹಳಸಿದ ಹಳತನ್ನು....'ಎನ್ನುತ್ತ ಹೊಸ ಬದುಕಿನ ಆಶ್ವಾಸನೆಯ ಸಾಲುಗಳನ್ನು ಹಾಡುವಾಗ ಅವನ ಸ್ವರವು ಹಂತಹಂತವಾಗಿ ತಾರಕಕ್ಕೇರುತ್ತ ಹೋಗಿತ್ತು.

'ಹುಡುಕೋಣ ಹೊಸ ಹಾದಿ.....' ಕೋಣೆ ತುಂಬ ಅನುರಣಿಸಿದ ಹಾಡಿನ ಅಲೆಗಳು ಅಲ್ಲಿದ್ದವರನ್ನೆಲ್ಲ ಸ್ಪರ್ಶಿಸುತ್ತಿದ್ದಂತೆ, ಕ್ಷಣಕಾಲ ಎಲ್ಲರೂ ವಿದ್ಯಾರ್ಥಿ-ಬದುಕಿನ ಭಾವಲೋಕಕ್ಕೆ ರವಾನಿಸಲ್ಪಟ್ಟಿದ್ದರು. ಸುತ್ತಮುತ್ತ ಹಾಡನ್ನು ಮೆಚ್ಚಿ ಉದ್ಗರಿಸುತ್ತಿದ್ದ ಗೆಳೆಯರತ್ತ ಕೈ ಬೀಸುತ್ತಿದ್ದನಾದರೂ, ಪಾರ್ಥನ ಕಣ್ಣಿಗೆ ಅವರೊಬ್ಬರೂ ಕಾಣುತ್ತಿರಲಿಲ್ಲ. ಅವನ ಕಣ್ಣುಗಳ ಮೇಲೆ ಮಂಜಿನ ಪೊರೆ ಬಂದಂತಾಗಿತ್ತು. ●